# ಪ್ರಕಟಣೆಗಾಗಿ

2017ರ ಸರ್ಕಾರಿ ಪ್ರಾಥಮಿಕ ಶಾಲೆಗಳ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ನೇಮಕಾತಿಯ ತಾತ್ಕಾಲಿಕ (Provisional) ಪರಿಶೀಲನಾ ಪಟ್ಟಿಯನ್ನು ದಿನಾಂಕ:20-06-2018ರಂದು ಪ್ರಕಟಿಸಿದೆ. ಪರೀಕ್ಷೆಗೆ ಹಾಜರಾಗಿರುವ ಎಲ್ಲಾ ಅಭ್ಯರ್ಥಿಗಳ ಅಂಕ ವಿವರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ www.schooleducation.kar.nic.in ಪ್ರಕಟಿಸಲಾಗಿದೆ. ಸದರಿ ವೆಬ್‌ಸೈಟ್‌ನಲ್ಲಿ **(Link: GPSTR marks list)** ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ **(Register No.)** ಮತ್ತು ಜನ್ಮ ದಿನಾಂಕ **(Date of Birth)** ನ್ನು ನಿರ್ದಿಷ್ಟ ಸ್ಥಳದಲ್ಲಿ **"entry"** ಮಾಡಿ **"generate"** ಎನ್ನುವ **"icon"** ಮೇಲೆ ಕ್ಲಿಕ್ ಮಾಡಿದ್ದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ವೀಕ್ಷಿಸಬಹುದು. ಇದರೊಂದಿಗೆ ಅಭ್ಯರ್ಥಿವಾರು ವಿದ್ಯಾರ್ಹತೆಗೆ ನಿಗದಿಗೊಳಿಸಿರುವ (ಪದವಿ, ಬಿ.ಇಡಿ/ಡಿ.ಇಡಿ, ಟಿ.ಇ.ಟಿ.) ಪರೀಕ್ಷೆಗಳ **"Weightage"** ವಿವರಗಳು ಹಾಗೂ ಅಂತಿಮ ಮೆರಿಟ್ ಸ್ಕೋರ್ ಸಹ ಲಭ್ಯವಿರುತ್ತದೆ. ಹುದ್ದೆವಾರು ಹಾಗೂ ಪ್ರವರ್ಗವಾರು ಕಟ್‌ಆಫ್ ಅಂಕಗಳನ್ನು **(Link: GPSTR – Cut off details)** ಪ್ರಕಟಿಸಲಾಗಿದೆ.

ಇಲಾಖಾ ನೇಮಕಾತಿ ಅಧಿಸೂಚನೆ ಸಂಖ್ಯೆ:ಆವಿ2/ಪ್ರಾಶಾಶಿ ನೇಮಕಾತಿ/26/2017-18 ದಿನಾಂಕ: 24-08-2017ರ ಅನ್ವಯ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳ ವಿದ್ಯಾರ್ಹತೆ, ಸ್ಪರ್ಧಾತ್ಮಕ ಪರೀಕ್ಷೆ, ಟಿ.ಇ.ಟಿ. ಪರೀಕ್ಷೆಯ (ಪದವಿ-25%, ಬಿ.ಇಡಿ/ ಡಿ.ಇಡಿ-25%, ಟಿ.ಇ.ಟಿ.-15% ಮತ್ತು ಸ್ಪರ್ಧಾತ್ಮಕ ಪರೀಕ್ಷೆ-35%) ಶೇಕಡಾವಾರು ಅಂಕಗಳನ್ನು ಆಧರಿಸಿ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿದೆ.

2017ರ ಸರ್ಕಾರಿ ಪ್ರಾಥಮಿಕ ಶಾಲೆಗಳ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ನೇಮಕಾತಿಯ ನಾಲ್ಕು ಹಂತದ ಪರೀಕ್ಷೆಗಳ ಪರಿಷ್ಕೃತ ಕೀ ಉತ್ತರಗಳನ್ನು ವೆಬ್‌ಸೈಟ್‌ನಲ್ಲಿ **(Link: GPSTR –Final Answer Key)** ಪ್ರಕಟಿಸಲಾಗಿದೆ.

ಕೆಲವು ಜಿಲ್ಲೆಗಳಲ್ಲಿನ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ (Provisional) ನಿಗದಿತ ಖಾಲಿ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಪ್ರಕಟಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಪರಿಷ್ಕರಿಸಿ ಪ್ರಕಟಿಸಿದೆ.

ಕೆಲವು ಅಭ್ಯರ್ಥಿಗಳ ಫಲಿತಾಂಶವನ್ನು ಅನಿವಾರ್ಯಕಾರಣಗಳಿಂದ ತಡೆಹಿಡಿಯಲಾಗಿದೆ **(Withheld).** ವೇಳಾಪಟ್ಟಿಯಲ್ಲಿ ನಿಗದಿಗೊಳಿಸಲಾಗುವ ಪರಿಶೀಲನಾ ಅವಧಿಯಲ್ಲಿ ಸದರಿ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ)ರವರನ್ನು ಸಂಪರ್ಕಿಸುವುದು. ಪರಿಶೀಲನಾ ಸಮಯದಲ್ಲಿ ಸದರಿ ಅಭ್ಯರ್ಥಿಗಳ ದಾಖಲೆಗಳು ಅಥವಾ ಅಹವಾಲುಗಳು ಸಮರ್ಪಕವಾಗಿದ್ದಲ್ಲಿ ಅಂತಿಮ ಅಂಕಗಳನ್ನು ಪರಿಗಣಿಸಿ, ರ್‍ಯಾಂಕ್‌ಪಟ್ಟಿಯಲ್ಲಿ ಅವರ ಅರ್ಹತಾ ಸ್ಥಾನವನ್ನು ನಿಗದಿಗೊಳಿಸಲಾಗುವುದು. ಅದರಂತೆ ತಾತ್ಕಾಲಿಕ ರ್‍ಯಾಂಕ್ ಪಟ್ಟಿಯಲ್ಲಿ ಅವಶ್ಯ ತಿದ್ದುಪಡಿಗಳನ್ನು ಮಾಡಿ ಅಂತಿಮ ರ್‍ಯಾಂಕ್‌ಪಟ್ಟಿ ಪ್ರಕಟಿಸಲಾಗುವುದು.

ಪರಿಷ್ಕೃತ ವೇಳಾಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

**Visit : www.schooleducation.kar.nic.in**

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

23-6-18